# ಕರ್ನಾಟಕ ವಿಧಾನ ಪರಿಷತ್ತು

**ಸದಸ್ಯರ ಹೆಸರು : ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ)**
**ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : 1030**
**ಉತ್ತರಿಸಬೇಕಾದ ದಿನಾಂಕ : 27.12.2022**
**ಉತ್ತರಿಸಬೇಕಾದ ಸಚಿವರು : ಮಾನ್ಯ ಪಶುಸಂಗೋಪನೆ ಸಚಿವರು.**

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ವಿಜಯಪುರ ಹಾಗೂ ಬಾಗಲಕೋಟೆ ಅವಳಿ ಜಿಲ್ಲೆಗಳಾಗಿದ್ದು. ಸಹಕಾರ ಹಾಲು ಒಕ್ಕೂಟಕ್ಕೆ ಅತೀ ಹೆಚ್ಚು ರೈತರು ಹಾಲನ್ನು ಪೂರೈಸುತ್ತಿರುವುದರಿಂದ ಈ ಎರಡು ಜಿಲ್ಲೆಗಳಿಂದ ಪ್ರತಿ ದಿನ ಎಷ್ಟು ಹಾಲು ಸಂಗ್ರಹಣೆಯಾಗುತ್ತಿದೆ. ಪ್ರತಿ ಲೀಟರ್‌ಗೆ ಸರ್ಕಾರದಿಂದ ಎಷ್ಟು ಪ್ರೋತ್ಸಾಹ ಧನ ನೀಡಲಾಗುತ್ತಿದೆ. (ಜಿಲ್ಲಾವಾರು ಮಾಹಿತಿ ನೀಡುವುದು)</td><td>ಪ್ರತಿ ದಿನ ಸಂಗ್ರಹಣೆಯಾಗುತ್ತಿರುವ ಹಾಲಿನ ವಿವರಗಳನ್ನು ಈ ಕೆಳಕಂಡಂತೆ ನೀಡಲಾಗಿದೆ.<br>(ಕೆ ಜಿ ಗಳಲ್ಲಿ)<br><table><tr><th>ವಿಜಯಪುರ ಜಿಲ್ಲೆ</th><th>ಬಾಗಲಕೋಟೆ ಜಿಲ್ಲೆ</th><th>ಒಟ್ಟು</th></tr><tr><td>29730</td><td>130654</td><td>160384</td></tr></table><br>ಸರ್ಕಾರದಿಂದ ಪ್ರತಿ ಲೀಟರ್ ಗುಣಮಟ್ಟದ ಹಾಲಿಗೆ ರೂ.5/- ಪ್ರೋತ್ಸಾಹ ಧನವನ್ನು ನೀಡಲಾಗುತ್ತಿದೆ.</td></tr>
<tr><td>ಆ)</td><td>ಬಾಗಲಕೋಟೆ ಜಿಲ್ಲೆಯು ಒಟ್ಟು 10 ತಾಲ್ಲೂಕುಗಳನ್ನು ಒಳಗೊಂಡಿದ್ದು, ಇಲ್ಲಿನ ರೈತರು ಹೆಚ್ಚು ಹಾಲು ಉತ್ಪಾದನೆಯಲ್ಲಿ ತೊಡಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಜಿಲ್ಲೆಯ ರೈತರನ್ನು ಪ್ರೋತ್ಸಾಹಿಸಲು ಸರ್ಕಾರ ಕೈಗೊಂಡ ಕ್ರಮವೇನು;</td><td>ಬಂದಿದೆ.<br>1. ಹಾಲು ಉತ್ಪಾದನೆ ಹೆಚ್ಚಿಸಲು ಸರ್ಕಾರದಿಂದ ರೂ.5/- ಪ್ರತಿ ಲೀಟರ್‌ಗೆ ಪ್ರೋತ್ಸಾಹ ಧನ ನೀಡಲಾಗುತ್ತಿದೆ.<br>2. ಪ್ರತಿ ಪಶುಚಿಕಿತ್ಸಾ ಸಂಸ್ಥೆ ವ್ಯಾಪ್ತಿಯ ಗ್ರಾಮಗಳಲ್ಲಿ ಹಾಲಿನ ಉತ್ಪಾದನೆ ಹೆಚ್ಚಿಸಲು ರಾಷ್ಟ್ರೀಯ ಕೃತಕ ಗರ್ಭಧಾರಣೆ ಯೋಜನೆಯಡಿ ಕೃತಕ ಗರ್ಭದಾರಣೆ ಒದಗಿಸಲು ಕ್ರಮವಹಿಸಿದೆ.<br>3. ರೈತರು ಉತ್ಪಾದನೆ ಮಾಡುವ ಹಾಲಿಗೆ ಹಾಲು ಉತ್ಪಾದಕರ ಸಹಕಾರ ಸಂಘದ ಮೂಲಕ ಮಾರುಕಟ್ಟೆ ಒದಗಿಸಲು ಕ್ರಮವಹಿಸಿದೆ.<br>4. ಜಿಲ್ಲೆಯಲ್ಲಿರುವ ಜಾನುವಾರುಗಳಿಗೆ ಹಾಲು ಉತ್ಪಾದಕರ ಸಹಕಾರ ಸಂಘದ ಮೂಲಕ ರಿಯಾಯಿತಿ ದರದಲ್ಲಿ ಪಶು ಆಹಾರ ಮತ್ತು ಪಶುಚಿಕಿತ್ಸಾ ಸಂಸ್ಥೆಗಳ ಮೂಲಕ ಚಿಕಿತ್ಸೆ ನೀಡಲಾಗುತ್ತಿದೆ.</td></tr>
</table>

| | | |
|---|---|---|
| ಇ) | ಬಾಗಲಕೋಟೆ ನವ ನಗರದಲ್ಲಿ ಒಂದು ಲಕ್ಷ ಲೀಟರ್ ಸಾಮರ್ಥ್ಯದ ನೂತನ ಮೆಗಾ ಡೈರಿ ಸ್ಥಾಪಿಸಲು ಸರ್ಕಾರ ಚಿಂತನೆ ನಡೆಸಿದೆಯೇ; ನಡೆಸಿದ್ದಲ್ಲಿ, ಯಾವ ಕಾಲಮಿತಿಯೊಳಗೆ ಸ್ಥಾಪಿಸಲು ಕ್ರಮ ಕೈಗೊಳ್ಳುವುದು; ಇಲ್ಲದಿದ್ದಲ್ಲಿ, ಸ್ಥಾಪಿಸಲು ಇರುವ ಅಡಚಣೆಗಳೇನು; (ವಿವರ ನೀಡುವುದು) | ವಿಜಯಪುರ-ಬಾಗಲಕೋಟೆ ಜಿಲ್ಲಾ ಹಾಲು ಒಕ್ಕೂಟವು, ನವನಗರದಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಿಂದ 7 ಎಕರೆ ಜಮೀನನ್ನು ಪಡೆದಿದ್ದು, ಒಕ್ಕೂಟದ ಮೂಲಭೂತ ಸೌಕರ್ಯ ನಿಧಿಯಿಂದ ದಿನವಹಿ 50 ಸಾವಿರದಿಂದ 1 ಲಕ್ಷ ಲೀಟರ್ ಸಾಮರ್ಥ್ಯದ ನೂತನ ಡೇರಿಯನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಪ್ರಸ್ತುತ ಸಿವಿಲ್ ಕಾಮಗಾರಿ ಪೂರ್ಣಗೊಂಡಿದ್ದು ಎಲೆಕ್ಟ್ರಿಕ್ ಮತ್ತು ಮೆಕ್ಯಾನಿಕಲ್ ಕಾಮಗಾರಿಯು ಚಾಲ್ತಿಯಲ್ಲಿರುತ್ತದೆ. |
| ಈ) | ಬಾಗಲಕೋಟೆ ನವ ನಗರದಲ್ಲಿ ಈಗಾಗಲೇ ಸ್ಥಳ ಗುರುತಿಸಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಜಮೀನು ಒದಗಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | |
| ಉ) | ಜಮೀನು ಒದಗಿಸಿದ್ದರು ಸಹ ಪ್ರತ್ಯೇಕ ಮೆಗಾ ಡೈರಿ ಸ್ಥಾಪಿಸಲು ಸರ್ಕಾರ ಆಸಕ್ತಿ ವಹಿಸದೇ ಇರುವುದರಿಂದ ಈ ಭಾಗದ ರೈತರು ಕಳವಳ ವ್ಯಕ್ತಪಡಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದ್ದಲ್ಲಿ ಈ ಕುರಿತು ಸರ್ಕಾರದ ಚಿಂತನೆಯೇನು? (ಮಾಹಿತಿ ಒದಗಿಸುವುದು) | |

**ಇ- ಪಸಂಮೀ 323 ಸಲೆವಿ 2022**

**(ಪ್ರಭು ಬಿ. ಚವ್ಹಾಣ್)**
**ಪಶುಸಂಗೋಪನೆ ಸಚಿವರು**